ಸಿಸಿ **1100/2023**

ದಿನಾಂಕ:**04.06.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

<u>ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:</u>

ಮೃತ ವ್ಯಕ್ತಿಯ ಪಿ ಎಮ್ ಮಾಡಿದ ಸಮಯ ಮೃತದೇಹದ ಭಾವಚಿತ್ರಗಳನ್ನು ತೆಗೆದ ಬಗ್ಗೆ ನನಗೆ ಗೊತ್ತಿಲ್ಲ. ಮಹಜರು ಕಾಲದಲ್ಲಿ ಭಾವಚಿತ್ರಗಳನ್ನು ತೆಗೆದ ಬಗ್ಗೆ ನನ್ನ ಕಡತದಲ್ಲಿ ಕಂಡುಬರುತ್ತಿಲ್ಲ. ವಾಹನದ ಫೋಟೋವನ್ನು ಸಿ ಡಿ ಗೆ ವರ್ಗಾಯಿಸಿದ ದಿನಾಂಕವನ್ನು ನಿಪಿ-11 ದೃಡಪತ್ರದಲ್ಲಿ ನಮೂದಿಸಿಲ್ಲ. ನಿಪಿ-11 ರಲ್ಲಿ ಆ ದಾಖಲೆ ಕೊಟ್ಟ ದಿನಾಂಕ ಹಾಗೂ ಅದನ್ನು ಸ್ವೀಕರಿಸಿದ ದಿನಾಂಕ ನಮೂದಿಲ್ಲ ಎಂದರೆ ಸರಿ. ವಾಹನದ ಫೋಟೋವನ್ನು ಡಿಜಿಟಲ್ ಕ್ಯಾಮರಾದಿಂದ ಕಂಪ್ಯೂಟರ್ ಮುಖಾಂತರ ಸಿ ಡಿ ಗೆ ವರ್ಗಾವಣೆ ಮಾಡಲಾಗಿದೆ. ಆ ರೀತಿ ಡಿಜಿಟಲ್ ಕ್ಯಾಮರಾದಿಂದ ಕಂಪ್ಯೂಟರ್ ಮುಖಾಂತರ ಸಿ ಡಿ ಗೆ ವರ್ಗಾವಣೆ ಮಾಡಿರುವ ಬಗ್ಗೆ ನಿಪಿ-11 ದೃಡಪತ್ರದಲ್ಲಿ ನಮೂದು ಇಲ್ಲ. ದಿ.1-10-23 ರಲ್ಲಿ ಆ ರೀತಿ ಡಿಜಿಟಲ್ ಕ್ಯಾಮರಾದಿಂದ ಫೋಟೋಗಳನ್ನು ಕಂಪ್ಯೂಟರ್ ಮುಖಾಂತರ ಸಿ ಡಿ ಗೆ ವರ್ಗಾವಣೆ ಮಾಡಲಾಗಿದೆ. ನಿಪಿ-11 ರಲ್ಲಿ ಆ ದಿನಾಂಕದ ಬಗ್ಗೆ ನಮೂದಿಲ್ಲ ಎಂದರೆ ಸರಿ.

ನಮ್ಮ ಠಾಣೆಯಲ್ಲಿ 2-3 ಡಿಜಿಟಲ್ ಕ್ಯಾಮರಾಗಳು ಇರಬಹುದು. ಡಿಜಿಟಲ್ ಕ್ಯಾಮರ ಸೋನಿ ಕಂಪನಿಯದ್ದಾಗಿದ್ದು ನಿಪಿ-11 ರಲ್ಲಿ ನಮೂದಿಸಿರುವ ಡಿಜಿಟಲ್ ಕ್ಯಾಮರ ಯಾವ ಕಂಪನಿಯದ್ದು ಎಂದು ದೃಡಪತ್ರದಲ್ಲಿ ನಮೂದಿಲ್ಲ ಎಂದರೆ ಸರಿ. ಫೋಟೋ ತೆಗೆದ ದಿನವೇ ಫೋಟೋಗಳನ್ನು ಸಿಡಿಗೆ ವರ್ಗಾವಣೆ ಮಾಡಲಾಗಿದೆ. ಫೋಟೋಗಳನ್ನು ದಿ.01-10-23 ರಂದು ತೆಗೆಯಲಾಗಿದೆ. ಸಿ ಡಿ ಎಂದರೆ ಬೇರೆ, ಡಿವಿಡಿ ಎಂದರೆ ಬೇರೆ ಎಂದರೆ ಸರಿ. ಮಹಜರು ಮಾಡಿದ ದಿನಾಂಕ ಗೊತ್ತಿದೆಯಾ ಎಂದರೆ ಸಾಕ್ಷಿಯು ಅದನ್ನು ನನ್ನ ಹಿಂದಿನ ತನಿಖಾಧಿಕಾರಿ ಚಾಸಾ-18 ರವರು ಮಾಡಿದ್ದಾರೆಂದು ನುಡಿಯುತ್ತಾರೆ.

ನಾನು ಹೇಳಿದ ದಿನಾಂಕದಂದು ಚಾಸಾ-11 ರವರಿಗೆ ನಾನು ಯಾವುದೇ ನೋಟೀಸ್ ನೀಡಿಲ್ಲ ಮತ್ತು ಚಾಸಾ-11 ರವರು ನಾನು ನೀಡಿದ ನೋಟೀಸಿಗೆ ಯಾವುದೇ ಉತ್ತರ ಕೂಡಾ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿ ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಸಮರ್ಪಕವಾದ ತನಿಖೆ ನಡೆಸದೇ ಸುಳ್ಳು

ದೋಷಾರೋಪಣಾ ಪತ್ರವನ್ನು ಆರೋಪಿಯ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.